ಮಂತ್ರಿಯಂವರಿಂದ ಹೇಳಿಕೆ

ರೈತರಿಗೆ ಹತ್ತಿ ಬಿಜದ ವಿತರಣೆಯಲ್ಲಿ ವಿಳಂಬವಾಗಿರುವುದರ ಬಗ್ಗೆ ತಂದಿರುವ ನಿಲುವಳಿ ಸೂಚನೆಯಂ ಕುರಿತು

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ತಾವು ಅವಕಾಶ ಕೊಟ್ಟರೆ ಅವರ ಪ್ರಶ್ನೆಗೆ ಉತ್ತರಿಸುತ್ತೇನೆ. ಈಗಾಗಲೇ ಈ ಸದನದಲ್ಲಿ ಹತ್ತಿ ಬೀಜದ ಬಗ್ಗೆ ಪ್ರಸ್ತಾಪವಾಗಿದೆ. ನಾನು ಸ್ಪಷ್ಟವಾಗಿ ಇದರ ಬಗ್ಗೆ ಸರ್ಕಾರದ ನಿಲುವನ್ನು ಹೇಳಿದ್ದೇನೆ. ಕಳೆದ ೪-೫ ವರ್ಷಗಳಿಂದ ೧೦೪ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಏನು ಹತ್ತಿ ಬೀಜದ ಉತ್ಪಾದನೆ ಮಾಡುತ್ತಿದ್ದವು ಅದು ಈಗ ಕಡಿಮೆಯಾಗುತ್ತಾ ಬಂದಿದೆ. ಕಳೆದ ವರ್ಷ ಕೇವಲ ೪ ಲಕ್ಷ ಟನ್ ಬೀಜ ಉತ್ಪಾದನೆಯಾಗಿದೆ. ಹೋದ ವರ್ಷ ಹತ್ತಿಗೆ ಒಳ್ಳೆಯ ಧಾರಣೆ ಬಂತು. ಕಳೆದ ವರ್ಷ ರೈತರು ಸೂಕ್ಷ್ಮಕಾಂತಿ ಬೀಜವನ್ನು ಕೇಳಿದರು ಈ ವರ್ಷ ಅದನ್ನು ಕೇಳುತ್ತಿಲ್ಲ. ಇವತ್ತು ಹತ್ತಿ ಬೀಜಕ್ಕೆ ಬೇಡಿಕೆ ಇದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಕಾರಣ ಸರ್ಕಾರ ಅಲ್ಲ, ಆದರೂ ಮಾನ್ಯ ವಿತ್ತರು ಸರ್ಕಾರ ಬೀಜವಾಬ್ದಾರಿ ಎಂದು ಹೇಳುತ್ತಾರೆ. ಅವರು ಬೀಜವಾಬ್ದಾರಿಯಿಂದ ಕೇಳಿದ್ದಾರೋ ಏನೋ ತಿಳಿಯುತ್ತಿಲ್ಲ. ಸರ್ಕಾರ ಜವಾಬ್ದಾರಿಯಿಂದ ಇರುವುದರಿಂದ ಈ ಪರಿಸ್ಥಿತಿ ಇದೆ. ಎಲ್ಲಾ ಕಡೆ ಸರಿಯಾಗಿ ಹತ್ತಿ ಬೀಜವನ್ನು ವಿತರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಪ್ರತಿದಿನ ಮಾನಿಟರ್ ಮಾಡುತ್ತಿದ್ದೇನೆ. ಹತ್ತಿ ಬೀಜಕ್ಕೆ ಬೇಡಿಕೆ ಇದೆ. ಅಂದಾಕ್ಷಣ ಕೂಡಲೇ ಕೊಡುವುದಕ್ಕೆ ಸಾಧ್ಯವೆ? ಹತ್ತಿ ಬೀಜವನ್ನು ಉತ್ಪಾದಿಸಲು ಎರಡು ವರ್ಷಗಳು ಬೇಕಾಗುತ್ತದೆ. ಯಾವಾಗ ಉತ್ಪಾದನೆ ಕಡಿಮೆಯಾಗುತ್ತದೋ ಆಗ ಬೇಡಿಕೆ ಜಾಸ್ತಿಯಾಗುತ್ತದೆ. ಒಮ್ಮೆಲೇ ಹೆಚ್ಚಿನ ಬೀಜವನ್ನು ಉತ್ಪಾದಿಸಲು ಸಾಧ್ಯವಿಲ್ಲ. ಕಳೆದ ವರ್ಷ ಹತ್ತಿಗೆ ಧಾರಣೆ ಬಂದಿದ್ದರಿಂದ ಈ ರೀತಿ ಆಯಿತು. ಈಗ ೧೫೦ ಕ್ವಿಂಟಾಲ್ ಹತ್ತಿ ಬೀಜವನ್ನು ಮಹಾರಾಷ್ಟ್ರದಿಂದ ತರುತ್ತಿದ್ದೇನೆ. ಮಹಾರಾಷ್ಟ್ರಕ್ಕೆ ನಾನೇ ಸ್ವತಃ ವ್ಯವಸಾಯ ಸಚಿವರನ್ನು ಭೇಟಿಯಾಗಲಿಕ್ಕೆ ಹೋಗುತ್ತಿದ್ದೇನೆ. ಜೊತೆಗೆ ಗುಜರಾತ್ ರಾಜ್ಯದವರನ್ನು ಕಾಂಟಾಕ್ಟ್ ಮಾಡಿರುವುದರಿಂದ ಅಲ್ಲಿಂದಲೂ ತರುತ್ತೇವೆ ಆಷ್ಟೆ ಅಲ್ಲದೆ ಅನೇಕ ಖಾಸಗಿ ಕಂಪನಿಗಳಿಂದಲೂ ಸಹ ಸರ್ಟಿಫೈಡ್ ಸೀಡ್ಸ್ ಅವ್ನ್ನು ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಕುಂದಾಪುರ ತಾಲ್ಲೂಕಿನಲ್ಲಿನ ಉತ್ತರ ಕನ್ನಡ ಜಿಲ್ಲೆಯಲ್ಲಿನ ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿನ ರೈತರಿಗೂ ಕೂಡ ಹತ್ತಿ ಬೀಜ ಬೇಕಾಗಿದೆ. ಹತ್ತಿ ಬೀಜವನ್ನು ಹಾಕಿದ ಕಡೆ ಎಲ್ಲ ಬಾಕುವುದಕ್ಕೆ ರೈತರು ಮುಂದೆ ಬಂದಿದ್ದಾರೆ. ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದೆ. ಕೋಲಾರ ಜಿಲ್ಲೆಯಲ್ಲಿ ಕೊಟ್ಟಿದ್ದೇವೆ. ಇನ್ನೂ ಬೇಕಾದರೆ ನನ್ನನ್ನು ಭೇಟ್ಟಿಯಾಗಲಿ, ಏನು ಸಹಾಯ ಬೇಕೋ ಮಾಡಿಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ—ಬೇಜವಾಬ್ದಾರಿ ಯಾರದ್ದು ಎಂಬುದು ಇದರಿಂದ ಗೊತ್ತಾಗುತ್ತದೆ. ಹತ್ತೂವರೆ ಲಕ್ಷ ಎಕರೆಯಲ್ಲಿ ಹತ್ತಿ ಬೀಜವನ್ನು ಬಿತ್ತುತ್ತೇವೆ. ೪ ಲಕ್ಷ ಟನ್ ಬೀಜ ರೆಡಿಯಾಗಿವೆ ಅಂದರೆ.....

ಶ್ರೀ ಆರ್. ವಿ. ದೇಶಪಾಂಡೆ.—ಅದು ೪-೫ ವರ್ಷದ ಹಿಂದೆ ಇತ್ತು. ಈಗ ಕಡಿಮೆ ಆಗುತ್ತಾ ಬಂದಿದೆ.

ಶ್ರೀ ಆರ್. ವೆಂಕಟರಾಮಯ್ಯ.—ನಿನ್ನೆಯ ಪತ್ರಿಕೆಯನ್ನು ಓದಿದರೆ ಗೊತ್ತಾಗುತ್ತದೆ. ಕಲಘಟಕಿಯಲ್ಲಿ ಹತ್ತಿ ಬೀಜಕ್ಕೆಂದು ಹೋದ ನೂರಾರು ಜನರು ಆಸ್ಪತ್ರೆಯಲ್ಲಿ ಮಲಗಿದ್ದಾರೆ. ಅನೇಕ ರೈತರು ಲಾಠಿ ಏಟು ತಿಂದಿದ್ದಾರೆ. ಈಗಾಗಲೇ ಮಳೆ ಬಂದು ೧೫ ದಿವಸ ಆಯಿತು. ಮಳೆ ನಮಗಾಗಿ ಕಾಯುವುದಿಲ್ಲ. ಸಕಾಲದಲ್ಲಿ ಬಿತ್ತನೆ ಆಗಬೇಕು. ಮಾನ್ಯ ಮಂತ್ರಿಗಳು ಮಹಾರಾಷ್ಟ್ರಕ್ಕೆ ಹೋಗುತ್ತೇನೆ, ತರುತ್ತೇನೆ ಎಂಬುದಕ್ಕೆ ಬದಲು ಕೂಡಲೇ ಅಧಿಕಾರಿಗಳನ್ನು ಕಳುಹಿಸಿ ಎಲ್ಲಿ ಬೀಜ ಸಿಗುತ್ತದೆ ಅಲ್ಲಿಂದ ತಂದು ರೈತರಿಗೆ ಹಂಚುವ ವ್ಯವಸ್ಥೆ ಮಾಡಿ. ರೈತರಿಗೆ ಸಮಯಕ್ಕೆ ಸರಿಯಾಗಿ ಬೀಜ ದೊರೆತರ್ನ್ನವೆ. ಒಳ್ಳೆಯ ಬೆಳೆ ಬರುವುದು? ಹತ್ತು ಲಕ್ಷ ಎಕರೆಯಲ್ಲಿ ಬೆಳೆ ಬರುತ್ತದೆಂದರೆ ಅದಕ್ಕೆ ತಾವು ಸಿದ್ಧರಾಗಿರಬೇಕಾಗಿತ್ತು.

ದಯವಿಟ್ಟು ತಕ್ಷಣ ಸಪ್ಲೈ ಮಾಡಿ. ಆದು ಬಿಟ್ಟು ನೀವು ಬೇಜವಾಬ್ದಾರಿಯೋ ನಾವು ಬೇಜವಾಬ್ದಾರಿಯೋ ಎಂದು ಯಾತಕ್ಕೆ ಕೇಳುತ್ತೀರಿ ? ನಿಮ್ಮ ಬೇಜವ್ದಾರಿಯಿಂದ ನಮ್ಮ ರೈತರು ಸಫರ್ ಮಾಡುತ್ತಿದ್ದಾರೆ. ಹತ್ತಿ ಬೀಜ ಸಪ್ಲೈ ಮಾಡುವುದಕ್ಕೆ ಏನೇನು ವ್ಯವಸ್ಥೆ ಬೇಕೋ ಅದನ್ನು ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ.—ಅವರು ಇನ್ನೂ ಬೇಜವ್ದಾರಿಯಿಂದ ಮಾತನಾಡುತ್ತಿದ್ದಾರೆ. ೧೦ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಐದು ವರ್ಷದಿಂದ ಹತ್ತಿ ಉತ್ಪಾದನೆ ಆಗುತ್ತಿತ್ತು, ಈಗ ಕಡಿಮೆ ಯಾಗಿ ನಾಲ್ಕು ಲಕ್ಷಕ್ಕೆ ಇಳಿದಿದೆ. How can the Government visualise that the demand for seeds would be more this time ? ಈ ವರ್ಷ ಡಿಮ್ಯಾಂಡ್ ಹೆಚ್ಚಾಗಬಹುದು ಎಂದು ಯಾವ ಸರ್ಕಾರ ತಾನೇ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿದೆ ? ಆದರೂ ಸಹ.....

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಮಂತ್ರಿಗಳು ಮಾತನಾಡುವಾಗ ಬೇಜವಾಬ್ದಾರಿಯಿಂದ ಹೇಳುತ್ತಿದ್ದಾರೆ ಎಂದು ಹೇಳುವುದು ಸರಿಯಲ್ಲ. ನಮಗೆ ಇನ್‌ಫರ್ಮೇಷನ್ ಬರುವುದನ್ನು ನಾ ಹೇಳುತ್ತೇವೆ. ಎಲ್ಲ ಕಡೆ ನಡೆದಿರುವುದು ತಮಗೂ ಗೊತ್ತಿದೆ. ಮಾನ್ಯ ಮಂತ್ರಿಗಳು ಮೊದಲು ಸಮಸ್ಯೆಯನ್ನು ಆರ್ಥ ಮಾಡಿಕೊಳ್ಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಅವರು ಹೇಳಿದ್ದಾರೆ. ನಾನು ಬೇಜವಾಬ್ದಾರಿಯಿಂದ ಅಂತ ಹೇಳಲಿಲ್ಲ.

ಅಧ್ಯಕ್ಷರು.—ಅವರು ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿರುವುದನ್ನು ಓದಿ ಹೇಳಂತ್ತೇನೆ. ಕರ್ನಾಟಕ ರಾಜ್ಯದಲ್ಲಿ ಲಕ್ಷಾಂತರ ಎಕರೆಗಳಲ್ಲಿ ಹತ್ತಿ ಬೆಳೆಯತಕ್ಕ ರೈತರಿಗೆ ಸಕಾಲದಲ್ಲಿ ಬಿತ್ತನೆ ಹತ್ತಿ ಬೀಜವನ್ನು ಸರ್ಕಾರ ಒದಗಿಸದೇ ಇರುವುದರಿಂದ ರಾಜ್ಯದಲ್ಲಿ ರೈತರು ಪಡುತ್ತಿರುವ ತೊಂದರೆ ಬಗ್ಗೆ ಮತ್ತು ಸರ್ಕಾರ ಮುಖ್ಯವಾಗಿ ವ್ಯವಸಾಯ ಇಲಾಖೆ ಈ ವರ್ಗದ ರೈತರ ಬಗ್ಗೆ ತೋರಿಸುತ್ತಿರುವ ಅಲಕ್ಷ್ಯ, ಅಕ್ಷಮ್ಯ ಬೇಜವಾಬ್ದಾರಿ ನಿರ್ಲಕ್ಷ್ಯ ನೀತಿ ಬಗ್ಗೆ.....ಎಂದು ಹೇಳಿದರೆ ಏನರ್ಥ? ಸರ್ಕಾರ ದವರು ಬೇಕಾದಷ್ಟು ಸಪ್ಲೈ ಮಾಡಿದ್ದಾರೆ. ಆದರೂ ಸಹ ನಿಮ್ಮ ಕಳಕಳಿ ನಮಗೆ ಗೊತ್ತಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಹೇಳಿರುವುದು ಸರಿ. ಆಂಟಿಸಿಪೇಟ್ ಮಾಡಿ ತರಿಸ ಬೇಕಾಗಿತ್ತು. ೧೫ ದಿವಸದ ಹಿಂದೆ ಲಾಠಿ ಚಾರ್ಜ್ ಆಯಿತು. ಸಾವಿರಾರು ಜನರು ಕ್ಯೂ ನಿಂತು ರಸ್ತೆಯಲ್ಲಿ ಮಲಗಿದ್ದಾರೆ. ಆದರೆ ಇವರು ಮಹಾರಾಷ್ಟ್ರಕ್ಕೆ ಗುಜರಾತಿಗೆ ಹೊಗುತ್ತಿದ್ದೇನೆ ಎಂದು ಈಗ ಹೇಳತ್ತಿದ್ದಾರೆ. ಮೊದಲೇ ಈ ಕೆಲಸ ಮಾಡಬೇಕಾಗಿತ್ತು.

ಶ್ರೀ ಆರ್. ವಿ. ದೇಶಪಾಂಡೆ.—ನಮ್ಮ ಕಲ್ಪನೆಗೆ ಬರಬೇಕಲ್ಲ ? ಯಾವಾಗ ಹತ್ತಿಗೆ ರೇಟ್ ಹೋಯಿತು ಆಗ ವಿಜುಯಲೈಸ್ ಮಾಡಿದೆವು. ಕಳೆದ ಎಂಟು ತಿಂಗಳಿಂದ ನಾವು ಮಾನಿಟರಿಂಗ್ ಮಾಡುತ್ತಿದ್ದೇವೆ: ನನ್ನ ಲೆವೆಲ್‌ನಲ್ಲಿ ೨೦ ಮೀಟಿಂಗ್ ಮಾಡಿದ್ದೇನೆ. ಪ್ರತಿದಿನ ಮಾನಿಟರಿಂಗ್ ಮಾಡುತ್ತಿದ್ದೇನೆ. ಎಷ್ಟೋ ಶಾಸಕರು ನಮ್ಮ ಭಾಗಕ್ಕೆ ಬೀಜ ಕಳಂಹಿಸಿ ಎಂದಾಗ ಬೇಡಿಕೆ ನೋಡಿ ಯಾವ ಪ್ರಕಾರ ಸಹಾಯ ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ಮಹಾರಾಷ್ಟ್ರದಿಂದ ಹತ್ತಿ ಬೀಜ ಬರುತ್ತಿದೆ. ಅಲ್ಲಿಂದ ಇನ್ನೂ ಹೆಚ್ಚು ತರುವುದಕ್ಕೆ ಸಾಧ್ಯವಿದೆಯೋ ಎಂದು ಆ ರಾಜ್ಯದ ಮಂತ್ರಿಗಳ ಮೇಲೆ ಪ್ರಭಾವ ಬೀರುವುದಕ್ಕೆ ಹೋಗುತ್ತೇನೆ ಎಂದು ಹೇಳಿದೆ.

ಅಧ್ಯಕ್ಷರು.—ನಿಮ್ಮ ಶ್ರೀ ವೆಂಕಟರಾಮಯ್ಯನವರ ನಿಲುವಳಿ ಸೂಚನೆಯನ್ನು ತಿರಸ್ಕರಿಸಿದ್ದೇನೆ ಏಕೆಂದರೆ ಮಾನ್ಯ ಮಂತ್ರಿಗಳು ಸರಿಯಾಗಿ ಉತ್ತರ ಹೇಳಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಬೇಗ ಪ್ರೊಕ್ಯೂರ್‌ಮೆಂಟ್ ಮಾಡಿ ಕೊಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಎಷ್ಟು ಸಾಧ್ಯವೋ ಅಷ್ಟು ಕೊಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಕೋಲಾರ ಜಿಲ್ಲೆಗೆ ಎಷ್ಟು ಬೇಕೋ ಅಷ್ಟು ಕೊಡಿಸಿ.

ಅಧ್ಯಕ್ಷರು.—ನೀವು ಮಂತ್ರಿಗಳ ಪಕ್ಷದಲ್ಲಿ ಬಂದು ಕೂತು ಮಾತನಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ಪಕ್ಕದಲ್ಲಿ ಕೂತು ಮಾತನಾಡುವುದು ಏನಿದೆ.